## ಕರ್ನಾಟಕ ಸರ್ಕಾರ

ಆಯುಕ್ತರ ಕಚೇರಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ.
ಕೆ.ಆರ್. ವೃತ್ತ, ಬೆಂಗಳೂರು-560001.
ದೂರವಾಣಿ: 91-080-22212408
ಫ್ಯಾಕ್ಸ್ : 91-080-22277528

ಸಂಖ್ಯೆ: ತಾಂ.ಪ.ಭೂ.ಘಟಕ 54 /2008-09

ದಿನಾಂಕ: 17.10.2008

## ಸುತ್ತೋಲೆ

ವಿಷಯ: 11 ಇ ನಕ್ಷೆ ತಯಾರಿಸಲು ಪರವಾನಗಿ ಭೂಮಾಪಕರು ಸ್ಥಳಕ್ಕೆ ಭೇಟಿ ನೀಡುವುದು ಕಡ್ಡಾಯವಾಗಿದ್ದು, ಇದನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

★★★

ನೋಂದಣಿ ಪೂರ್ವ ನಕ್ಷೆಯನ್ನು ಮುಂದೆ ಉದ್ಭವಿಸಬಹುದಾದ ವ್ಯಾಜ್ಯಗಳನ್ನು ತಡೆಯುವ ಉದ್ದೇಶದಿಂದ ಜಾರಿಗೆ ತರಲಾಗಿದೆ. ಈ ಪದ್ಧತಿಯಲ್ಲಿ ಜಮೀನನ್ನು ಕೊಳ್ಳುವವರು ತಾವು ಖರೀದಿಸುತ್ತಿರುವ ಜಮೀನನ್ನು ಸ್ಥಳದಲ್ಲಿ ಅಳತೆಯ ಮೂಲಕ ಮಾರಾಟ ಮಾಡುವವರ ಸಮ್ಮುಖದಲ್ಲಿ ವಿಸ್ತೀರ್ಣದೊಂದಿಗೆ ಗುರುತಿಸಿಕೊಂಡು ಸ್ಪಷ್ಟ ಮಾಹಿತಿಯೊಂದಿಗೆ ನೋಂದಣಿ ಪ್ರಕ್ರಿಯೆ ನಡೆಯಬೇಕಾಗಿರುತ್ತದೆ. ಮಾರಾಟಗಾರರ ಅಥವಾ ಕ್ರಯಕ್ಕೆ ಕೊಳ್ಳುವವರ ಒತ್ತಡಕ್ಕೆ ಸಿಲುಕಿ ಕೆಲವು ಪರವಾನಗಿ ಭೂಮಾಪಕರು 11 ಇ ನಕ್ಷೆಗೆ ಒಳಪಡುವ ಜಮೀನಿಗೆ ಭೇಟಿ ನೀಡದೆ, ಅಗತ್ಯವಾಗಿ ಹಾಜರಾಗಬೇಕಾದವರ ಸಮ್ಮುಖದಲ್ಲಿ ಅಳತೆ ಮಾಡದೇ ಕೇವಲ ದಾಖಲೆಗಳಲ್ಲಿ ಮಾತ್ರ ಜಮೀನಿನಲ್ಲಿ ಎಲ್ಲರ ಸಮ್ಮುಖದಲ್ಲಿ ಅಳತೆ ಮೂಲಕ ನಕ್ಷೆ ತಯಾರಿಸಿರುವುದಾಗಿ ಸುಳ್ಳು ದಾಖಲೆಗಳನ್ನು ಸಿದ್ಧಪಡಿಸಿ ಸಲ್ಲಿಸುತ್ತಿರುವುದು ತಿಳಿದು ಬಂದಿದೆ. ಇದು ಪರವಾನಗಿ ಭೂಮಾಪಕರು ತಮ್ಮ ಮುಖ್ಯ ಕರ್ತವ್ಯದ ನಿಯಮವನ್ನು ಉಲ್ಲಂಘಿಸಿ ನಿಯಮಬಾಹಿರ ಕ್ರಮದಲ್ಲಿ ತೊಡಗಿ ಶಿಕ್ಷಾರ್ಹ ಅಪರಾಧ ಎಸಗಿದಂತಾಗುತ್ತದೆ. 11 ಇ ನಕ್ಷೆಗಳು ನೋಂದಣಿ ನಂತರ ಮ್ಯುಟೇಷನ್ ಆದ ಕೂಡಲೇ ಹಿಸ್ಸಾ ನಂಬ್ರು ಪಡೆದುಕೊಂಡು ದುರಸ್ತಿ ಆದ ನಂತರ ಶಾಶ್ವತವಾಗಿ ಸಂರಕ್ಷಿಸಬೇಕಾದ ಭೂದಾಖಲೆಯ ಸ್ವರೂಪ ಪಡೆಯುತ್ತದೆ. ಈ ರೀತಿಯ ಶಾಶ್ವತವಾದ ಭೂದಾಖಲೆಗಳನ್ನು ಸಿದ್ಧಪಡಿಸುವ ಪ್ರಮುಖ ಕಾರ್ಯ ನಿರ್ವಹಿಸುವ ಪರವಾನಗಿ ಭೂಮಾಪಕರು ಅಕ್ರಮವಾಗಿ 11 ಇ ನಕ್ಷೆ ಸಿದ್ಧಪಡಿಸಿದಲ್ಲಿ ಭಾರತೀಯ ದಂಡ ಸಂಹಿತೆಯ ಮೇರೆಗೆ ಶಿಕ್ಷಾರ್ಹ ಅಪರಾಧ ಎಸಗಿದಂತಾಗುವುದು ನಿಸ್ಸಂಶಯ. ಇಂತಹ ಅಕ್ರಮ 11 ಇ ನಕ್ಷೆ ಸಿದ್ಧಪಡಿಸಲು ಸಹಕರಿಸುವ ಮಾರಾಟಗಾರರು ಮತ್ತು ಕೊಳ್ಳುವವರೂ ಸಹ ಶಿಕ್ಷಾರ್ಹರಾಗಿರುತ್ತಾರೆ. ಇಂತಹ ಶಿಕ್ಷಾರ್ಹ, ನಿಯಮಬಾಹಿರ ಕೃತ್ಯಗಳಿಂದ ಪರವಾನಗಿ ಭೂಮಾಪಕರ ಯೋಜನೆಯ ಮೂಲ ಉದ್ದೇಶಕ್ಕೆ ಕುತ್ತು ಉಂಟಾಗುವುದರಿಂದ ಇನ್ನು ಮುಂದೆ ಮಾರಾಟ ಮಾಡುವವರ ಮತ್ತು ಕೊಳ್ಳುವವರ ಹಾಗೂ ಆರ್.ಟಿ.ಸಿ. ಯ ಇತರ ಹಕ್ಕುದಾರರ ಸಮ್ಮುಖದಲ್ಲಿ 11 ಇ ನಕ್ಷೆ ತಯಾರಿಸಬೇಕಾದ ಜಮೀನನ್ನು ನಿಯಮಾನುಸಾರ ಅಳತೆಗೆ ಒಳಪಡಿಸದೇ, ಅಗತ್ಯಕ್ಕೆ ತಕ್ಕಂತೆ ಮಹಜರ್ ಪಡೆಯದೇ ನಕ್ಷೆ ತಯಾರಿಸಿ ಹಾಜರುಪಡಿಸುವ ಎಲ್ಲಾ ಪರವಾನಗಿ ಭೂಮಾಪಕರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 409 ರ ಮೇರೆಗೆ ಕ್ರಿಮಿನಲ್ ಮೊಕದ್ದಮೆ ಹೂಡಿ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ಎಚ್ಚರಿಕೆ ನೀಡಲಾಗಿದೆ.

11_E ske.

ಪು-2.

ಇನ್ನು ಮುಂದೆ ಇಂತಹ ಅಕ್ರಮಗಳನ್ನು ತಪ್ಪಿಸುವ ಸಲುವಾಗಿ ಪರವಾನಗಿ ಭೂಮಾಪಕರು ತಾವು ಅಳತೆಗೆ ಭೇಟಿ ನೀಡುವ ಗ್ರಾಮದಲ್ಲಿ ಆ ಗ್ರಾಮ ನಾಮಫಲಕ ಇರುವ ಸಾರ್ವಜನಿಕ ಕಟ್ಟಡ ಅಂದರೆ ಶಾಲೆ/ಗ್ರಾಮ ಪಂಚಾಯಿತಿ/ಆಸ್ಪತ್ರೆ/ಅಂಗನವಾಡಿ ಅಥವಾ ಇನ್ನಾವುದೇ ಕಟ್ಟಡದ ಮುಂಭಾಗದಲ್ಲಿ ಮಾರಾಟ ಮಾಡುವ ಹಾಗೂ ಕೊಳ್ಳುವ ವ್ಯಕ್ತಿಗಳೊಂದಿಗೆ ಮೊಬೈಲ್‌ಗಳಲ್ಲಿರುವ ಕ್ಯಾಮರಾಗಳ ಮೂಲಕ ಭಾವಚಿತ್ರವನ್ನು ಕಡ್ಡಾಯವಾಗಿ ತೆಗೆದು ಅದನ್ನು 11 ಇ ನಕ್ಷೆಯೊಂದಿಗೆ ಹಾಜರುಪಡಿಸುವುದು. ಅಲ್ಲದೇ ಆ ಗ್ರಾಮಕ್ಕೆ ಅಳತೆಗಾಗಿ ಸದರಿ ದಿನಾಂಕದಂದು ಭೇಟಿ ನೀಡಿ ಅಳತೆ ಮಾಡಿದ ಬಗ್ಗೆ ಗ್ರಾಮ ಲೆಕ್ಕಿಗರು ಅಥವಾ ಗ್ರಾಮ ಸಹಾಯಕರ ಸಹಿಯನ್ನು ಮಹಜರ್‌ನಲ್ಲಿ ಕಡ್ಡಾಯವಾಗಿ ಪಡೆದು ಹಾಜರುಪಡಿಸುವುದು.

ಈ ಸೂಚನೆಗಳನ್ನು ಕೂಡಲೇ ಜಾರಿಗೊಳಿಸುವಂತೆ ಎಲ್ಲಾ ತಹಸೀಲ್ದಾರರುಗಳಿಗೆ ಸೂಚನೆ ನೀಡಲಾಗಿದೆ. ಈ ಕಾರ್ಯವು ಕಡ್ಡಾಯವಾಗಿ ಜಾರಿಯಾಗಿರುವ ಬಗ್ಗೆ ಅಗತ್ಯ ಕ್ರಮಗಳನ್ನು ಕೂಡಲೇ ಉಪ ವಿಭಾಗಾಧಿಕಾರಿಗಳು ಮತ್ತು ಭೂದಾಖಲೆಗಳ ಉಪ ನಿರ್ದೇಶಕರುಗಳು ಜರುಗಿಸಿ, ಆಯುಕ್ತರ ಕಚೇರಿಗೆ ವರದಿಯನ್ನು ಕಳುಹಿಸುವುದು.

ಸಹಿ/-
ಆಯುಕ್ತರು
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು.

ಪ್ರತಿಯನ್ನು:

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಮೈಸೂರು/ಬೆಳಗಾಂ/ಗುಲ್ಬರ್ಗಾ - ರವರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಭೂದಾಖಲೆಗಳ ಜಂಟಿ ನಿರ್ದೇಶಕರು, ( ವಿಚಾರಣೆ ಮತ್ತು ತನಿಖೆ ), ಭೂದಾಖಲೆಗಳ ಜಂಟಿ ನಿರ್ದೇಶಕರು (ತಾಂ) ಇವರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
4. ಪ್ರಾಚಾರ್ಯರು, ಭೂಮಾಪನ ತರಬೇತಿ ಸಂಸ್ಥೆ, ಮೈಸೂರು ಹಾಗೂ ಪ್ರಾದೇಶಿಕ ಭೂಮಾಪನ ತರಬೇತಿ ಸಂಸ್ಥೆ, ಗುಲ್ಬರ್ಗಾ ರವರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
5. ಎಲ್ಲಾ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪ ನಿರ್ದೇಶಕರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
6. ಎಲ್ಲಾ ಉಪ ವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
7. ಎಲ್ಲಾ ತಹಸೀಲ್ದಾರರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
8. ಭೂದಾಖಲೆಗಳ ಉಪ ನಿರ್ದೇಶಕರು, ಪಿ ಎಂ ಯುನಿಟ್, ಕೇಂದ್ರ ಕಚೇರಿ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

ಆಯುಕ್ತರ ಪರವಾಗಿ.
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು

11-E ske.